# ಶ್ರೀಕೃಷ್ಣ ಮಿಲ್ಕ್ಸ್ ಬೆಳ್ಳಿಹಬ್ಬ ಆಚರಣೆ



ರಾಜ್ಯದ ಖಾಸಗಿ ಡೈರಿ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ಮಾಡಿರುವ ಶ್ರೀಕೃಷ್ಣ ಮಿಲ್ಕ್ಸ್ 25 ವರ್ಷಗಳ ಸೇವೆ ಪೂರೈಸಿದ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ರಜತ ಮಹೋತ್ಸವ ಕಾರ್ಯಕ್ರಮ ಆಯೋಜಿಸಿತ್ತು. ಈ ಸಂದರ್ಭದಲ್ಲಿ ನೂತನ ಉತ್ಪಾದನೆಗಳನ್ನು ಬಿಡುಗಡೆ ಮಾಡಲಾಯಿತು. ಸಮಾರಂಭದಲ್ಲಿ ಸಂಸ್ಥೆ ನಿರ್ದೇಶಕರಾದ ಪ್ರದೀಪ್ ಪೈ, ದಿನೇಶ್ ಆರ್. ಪೈ, ಶ್ಯಾಮ ಕಾಮತ್, ಹನುಮಂತ ಪೈ, ಮಹೇಶ ಕಾಮತ್ ಉಪಸ್ಥಿತರಿದ್ದರು. ಐಟಿ ಉದ್ಯಮಿ ವಿವೇಕ ಪವಾರ್ ಮುಖ್ಯ ಅತಿಥಿಯಾಗಿದ್ದರು. ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲೂಕಿನ ಕಿರವತ್ತಿ ಗ್ರಾಮದಲ್ಲಿ 1989ರಲ್ಲಿ ಪ್ರಾರಂಭವಾದ ಶ್ರೀಕೃಷ್ಣ ಮಿಲ್ಕ್ಸ್ ಎರಡೂವರೆ ದಶಕಗಳ ಕಾಲ ಗುಣಮಟ್ಟದ ಹಾಲು, ಹಾಲು ಉತ್ಪನ್ನ ಹಾಗೂ ಸಿಹಿ ತಿಂಡಿಗಳನ್ನು ಪೂರೈಸಿ ಗ್ರಾಹಕರ ಮನಗೆದ್ದಿದೆ.